

ಆಕಾಶವಾಣಿ ಕಚೇರಿ ಆವರಣದಲ್ಲಿ ಶ್ರಮದಾನದಲ್ಲಿ ತೊಡಗಿರುವ ವಿಜಯ್ ಅಂಗಡಿ



ಆಕಾಶವಾಣಿ ಕಚೇರಿಗೆ ಹಸಿರು ಆವರಣವೇ ಆಭರಣ




ಆಕಾಶವಾಣಿ ಆವರಣಕ್ಕೀಗ ವಿಶೇಷ ಮೆರುಗು.

ಕಚೇರಿ ಕೆಲಸ ಮುಗಿದ ಮೇಲೆ ವಿಜಯ್ ಅಂಗಡಿ ಅವರ ಉಳಿದ ಸಮಯ ಶ್ರಮದಾನಕ್ಕೆ ಮೀಸಲು. ತಾನೊಬ್ಬ ಅಧಿಕಾರಿ ಎಂಬ ಹಮ್ಮುಬಿಮ್ಮು ಇಲ್ಲದೆ ಸ್ವತಃ ಕಳೆಗಿಡಗಳನ್ನು ಕಿತ್ತು ತೆಗೆಯುತ್ತಾರೆ. ಗುದ್ದಲಿ ಹಿಡಿದು ಗಿಡ ನೆಡುತ್ತಾರೆ. ಬೀಜ ಬಿತ್ತುತ್ತಾರೆ. ಬೇಸಿಗೆಯಲ್ಲಿ ಗಿಡಗಳಿಗೆ ನೀರು ಎರೆಯುತ್ತಾರೆ. ಈ ಎಲ್ಲಾ ಕೆಲಸಗಳನ್ನು ಅವರು ಸಂತೋಷದಿಂದ 'ದೇವರ ಕೆಲಸ' ಎಂಬಂತೆ ಮಾಡುತ್ತಾರೆ. ಸರ್ಕಾರಿ ಕೆಲಸ ದೇವರ ಕೆಲಸ ಎನ್ನುವ ಮಾತು ಕೇಳಿದ್ದೇವೆ. ವಿಜಯ್ ಅವರ ವಿಷಯದಲ್ಲಿ ಆ ಮಾತನ್ನು 'ಪರಿಸರದ ಕೆಲಸ ದೇವರ ಕೆಲಸ' ಎಂದು ಹೇಳಬಹುದು.

ಊರಿನಿಂದ ಬರುವಾಗ ರಸ್ತೆ ಬದಿಯಲ್ಲಿ ಬಿಸುಟ ಅಡಿಕೆ ಸಿಪ್ಪೆಯನ್ನು ತಮ್ಮ ಕಾರಿನಲ್ಲಿ ತುಂಬಿಸಿ ತಂದು ಗಿಡಗಳ ಬುಡಕ್ಕೆ ಹಾಕುತ್ತಾರೆ. 'ಅಡಿಕೆ ಸಿಪ್ಪೆ ನೀರು ಹಿಡಿದಿಡುವ ಗುಣವನ್ನು ಹೊಂದಿದೆ. ಕ್ರಮೇಣ ಇದು ಗೊಬ್ಬರವಾಗಿ ಮಾರ್ಪಡುತ್ತದೆ. ವರ್ಷದ ಹಿಂದೆ ಒಂದು ಕಿತ್ತಳೆ ಗಿಡ ಮಂಕಾಗಿ ಇತ್ತು. ಅದಕ್ಕೆ ಅಡಿಕೆ ಸಿಪ್ಪೆ ಹಾಕಿದೆ. ಆಶ್ಚರ್ಯವೆಂದರೆ ಈ ವರ್ಷ ಗಿಡ ಸೊಂಪಾಗಿ ಮೇಲೆದ್ದಿದೆ. ಇದು ಸಂಪೂರ್ಣ ಸಾವಯವ ತೋಟ. ಸಾವಯವ ಗೊಬ್ಬರ, ನೀರು ಇಷ್ಟರಿಂದಲೇ ಗಿಡಗಳು ಸಮೃದ್ಧವಾಗಿ ಬೆಳೆದಿವೆ. ಮುಂದಿನ ವರ್ಷ ಅನಾನಸು, ಸೀಬೆ, ಪಪ್ಪಾಯಿ, ಮಾವು, ಸೀತಾಫಲ, ಕಿತ್ತಳೆ, ಕಾಫಿ, ಬಾಳೆ, ಕಾಳುಮೆಣಸು ಗಿಡಗಳು ಫಲ ನೀಡಬಹುದು. ಕಬ್ಬು, ವೀಳ್ಯದೆಲೆ, ಗೆಣಸು, ಅರಸಿನ, ಒಂದೆಲಗ, ಅರಾರೂಟ್, ಅಮೃತಬಳ್ಳಿ, ಶುಂಠಿ, ಕರಿಬೇವು, ಬಸಳೆ, ನಿಂಬೆ ಹುಲ್ಲು, ಚಕ್ರಮುನಿ, ಲೋಳೆಸರ, ಸೂಜಿ ಮೆಣಸು ಫಸಲು ಕೊಡತೊಡಗಿದೆ' ಎನ್ನುವಾಗ ಅವರ ಮೊಗದಲ್ಲಿ ಅದೇನೋ ಖುಷಿ, ಸಂತೃಪ್ತಿ. ಅಲಂಕಾರಿಕ ಗಿಡಗಳಲ್ಲದೆ ಆಯಾ ಋತುವಿಗೆ ತಕ್ಕಂತೆ ಹೂ ಬಿಡುವ (ಸೀಸನಲ್ ಫ್ಲವರ್) ಗಿಡಗಳನ್ನೂ ಅಲ್ಲಿ ನೋಡಬಹುದು.

ಅವರು ಸಸ್ಯಗಳ ಬಗ್ಗೆ ಅಧ್ಯಯನವನ್ನೂ ಮಾಡುತ್ತಿದ್ದಾರೆ. ಪ್ರತಿ ಸಸ್ಯ ಯಾವುದಕ್ಕೆಲ್ಲಾ ಬಳಕೆಯಾಗುತ್ತದೆ, ಅದರಲ್ಲಿರುವ ಔಷಧೀಯ ಗುಣವೇನು ಎಂಬುದನ್ನು ಅವರು ಹೇಳಬಲ್ಲರು. ಈ ಬಗ್ಗೆ ಸಾರ್ವಜನಿಕರಲ್ಲೂ ಅರಿವು ಮೂಡಿಸುತ್ತಿದ್ದಾರೆ. ಚಕ್ರಮುನಿ ಸೊಪ್ಪಿನ ಉಪಯೋಗದ ಬಗ್ಗೆ ಅವರು ಬರೆದ ಪುಸ್ತಕ ಐದು ಮುದ್ರಣ ಕಂಡಿದೆ. ಸಹೋದ್ಯೋಗಿಗಳಿಗೆ, ಸಾರ್ವಜನಿಕರಿಗೆ ತಾನು ಹಣ ಕೊಟ್ಟು ತಂದ ಗಿಡಗಳನ್ನೂ ಉಚಿತವಾಗಿ ಕೊಟ್ಟಿದ್ದಾರೆ.

'ಕಚೇರಿ ಚೆನ್ನಾಗಿರಬೇಕು, ವಾತಾವರಣ ಚೆನ್ನಾಗಿರಬೇಕು ಎಂಬುದು ನನ್ನ ಆಶಯ. ಹಚ್ಚ ಹಸಿರಿನಿಂದ ಕಂಗೊಳಿಸುವ ಈ ಪರಿಸರ ನಿರ್ಮಾಣ ನನ್ನೊಬ್ಬನಿಂದಲೇ ಆದದ್ದಲ್ಲ – ಸಹೋದ್ಯೋಗಿಗಳಾದ ಸುಬ್ರಾಯ, ವಾಸುದೇವ್, ವರ್ಗೀಸ್, ಲೋಕೇಶ್, ಚೋಮ, ವನಿತಾ ಮುಂತಾದವರು ಕೈಜೋಡಿಸಿದ್ದಾರೆ. ಇದರಲ್ಲಿ ಅವರ ಶ್ರಮವೂ ಇದೆ' ಎಂದು ವಿನೀತರಾಗಿ ಹೇಳುತ್ತಾರೆ. ಆಕಾಶವಾಣಿಗೆ ಬರುವ ಸಾರ್ವಜನಿಕರು ತೋಟದ ಅಂದಕ್ಕೆ ಮಾರುಹೋಗಿದ್ದಾರೆ. ನಿಲಯದ ಹಿರಿಯ ಸಹೋದ್ಯೋಗಿ ಆರ್. ಶ್ರೀನಿವಾಸನ್ ಅವರು ಈ ಬೆಳವಣಿಗೆಯನ್ನು ಮೆಚ್ಚಿಕೊಂಡಿದ್ದಾರೆ.

ವಿಜಯ್ ಅಂಗಡಿ ಅವರ ಪರಿಸರ ಕಾಯಕಕ್ಕೆ 2007ರಲ್ಲಿ ರಾಜ್ಯ ಸರ್ಕಾರ 'ರಾಜ್ಯ ಪರಿಸರ ಪ್ರಶಸ್ತಿ' ನೀಡಿ ಗೌರವಿಸಿದೆ.

ವಿಜಯ್ ಅಂಗಡಿ ಅವರಿಗೆ ಮೆಚ್ಚುಗೆ ಹೇಳಬೇಕೆಂದಿದ್ದರೆ ಅಥವಾ ಸಸ್ಯಗಳ ಬಗ್ಗೆ ಮಾಹಿತಿ ಪಡೆಯಬೇಕೆಂದಿದ್ದರೆ, ಅವರ ಸಂಪರ್ಕ ಸಂಖ್ಯೆ: **94489 96495**

ಪ್ರತಿಕ್ರಿಯಿಸಿ: **feedback@sudha.co.in**